# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 1016 ಇ(1)/2022-23

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ:27-02-2023.

ಇವರಿಂದ:-

**ಕಾರ್ಯದರ್ಶಿ,**
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ",
ಬೆಂಗಳೂರು-560001.

ಇವರಿಗೆ:-

**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಸೇವೆಗಳು-7),
ವಿಧಾನಸೌಧ, ಬೆಂಗಳೂರು-560001.

27/3/23

ಮಾನ್ಯರೆ,

<u>ವಿಷಯ</u>:- ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳನ್ನು ಪ್ರತಿ ವರ್ಷ ನೇಮಕಾತಿ ಮಾಡುವ ಬಗ್ಗೆ.
<u>ಉಲ್ಲೇಖ</u>: ಅಧಿಸೂಚನೆ ಸಂಖ್ಯೆ:ಡಿಪಿಎಆರ್ 67 ಸೆಲೊಅ 2017, ದಿನಾಂಕ:30-05-2019.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆಯೋಗವು ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ ಹುದ್ದಗಳ ನೇಮಕಾತಿಯನ್ನು ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರನ್ವಯ ನಡೆಸುತ್ತಿದ್ದು, ಉಲ್ಲೇಖಿತ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುತ್ತಾರೆ.

**"by releasing the posts by the Government before the end of each calender year" "and shall complete the entire process preferable within one year from the date of notification"**

ಮೇಲ್ಕಂಡ ನಿಯಮಾನುಸಾರ ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿಯನ್ನು ಪ್ರತಿ ವರ್ಷ ನಿಯಮಿತವಾಗಿ ಜರುಗಿಸದೇ ಇರಲು ಆಯ್ಕೆ ಪ್ರಾಧಿಕಾರವಾದ ಆಯೋಗಕ್ಕೆ ಮತ್ತು ನೇಮಕಾತಿ ಪ್ರಾಧಿಕಾರವಾದ ಸರ್ಕಾರಕ್ಕೆ ತನ್ನದೇ ಆದ ತೊಡಕುಗಳು ಕಾರಣವಾಗಿವೆ. ಸದರಿ ಕಾರಣಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

1. ಆಯೋಗದಲ್ಲಿ ನಡೆಸಲಾಗುವ ಎಲ್ಲಾ ಗ್ರೂಪ್ 'ಎ' 'ಬಿ' ಮತ್ತು 'ಸಿ' ವೃಂದದ ನೇಮಕಾತಿಗಳ ಪ್ರಕ್ರಿಯೆಗಳನ್ನು ಪರೀಕ್ಷಾ ನಿಯಂತ್ರಕರು ನಿಭಾಯಿಸಬೇಕಿದ್ದು, ಸದರಿಯವರ ಮೇಲೆ ಅಧಿಕ ಕಾರ್ಯದೊತ್ತಡ ಉಂಟಾಗಿ, ನೇಮಕಾತಿ ಪ್ರಕ್ರಿಯೆಗಳು ವಿಳಂಬವಾಗುತ್ತಿತ್ತು.

...2

2. ಆಯೋಗದಲ್ಲಿ ಸಿಬ್ಬಂದಿಗಳ ಕೊರತೆಯಿರುತ್ತದೆ ಹಾಗೂ ಹಲವು ಗ್ರೂಪ್ 'ಎ' 'ಬಿ' ಮತ್ತು 'ಸಿ' ವೃಂದದ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯು ಜಾರಿಯಲ್ಲಿರುವ ಕಾರಣ ಇದರಿಂದಾಗಿ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ.

3. ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ಷೆಡ್ಯೂಲ್-Iರಲ್ಲಿ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿ ಮೂಲಕ ಭರ್ತಿ ಮಾಡಬೇಕಿರುವ ಸರ್ಕಾರದ ವಿವಿಧ ಇಲಾಖೆಗಳ ಮಾಹಿತಿಯು ಒಳಗೊಂಡಿದ್ದು, ಸದರಿ ಇಲಾಖೆಗಳು ತಮ್ಮಲ್ಲಿ ಸೃಜಿಸಲಾದ ಖಾಲಿ ಹುದ್ದೆಗಳ ಮಾಹಿತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ನೀಡುತ್ತಿದ್ದು, ನಂತರ ಸಿಆಸುಇ ಇವರು ಎಲ್ಲಾ ಹುದ್ದೆಗಳ ವಿವರಗಳನ್ನು ಕ್ರೋಢೀಕರಿಸಿ ಆಯೋಗಕ್ಕೆ ನೇಮಕಾತಿ ಪ್ರಕ್ರಿಯೆಯನ್ನು ಜರುಗಿಸುವ ಮುಂದಿನ ಕ್ರಮಕ್ಕಾಗಿ ವರ್ಗಾಯಿಸುವ ಪದ್ಧತಿಯು ಜಾರಿಯಲ್ಲಿರುತ್ತದೆ. ಆದಕಾರಣ ವಿವಿಧ ಹಂತಗಳಲ್ಲಿ ಸರ್ಕಾರಕ್ಕೆ ಹುದ್ದೆಗಳ ಮಾಹಿತಿಯು ತಡವಾಗಿ ಸ್ವೀಕೃತವಾಗುತ್ತಿರುವುದರಿಂದ, ಸರ್ಕಾರದಿಂದ ಆಯೋಗಕ್ಕೆ ಪ್ರಸ್ತಾವನೆಗಳು ತಡವಾಗಿ ಸ್ವೀಕೃತವಾಗುತ್ತಿದೆ.

ಮೇಲ್ಕಂಡ ಕಾರಣಗಳಿಂದಾಗಿ ನೇಮಕಾತಿ ಪ್ರಕ್ರಿಯೆಯನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಆದರೆ ಆಯೋಗದಲ್ಲಿ ಪರೀಕ್ಷಾ ನಿಯಂತ್ರಕರ ಹುದ್ದೆಯ ಸಮವರ್ತಿಯಾಗಿ ಪ್ರಸ್ತುತ ಜಂಟಿ ಪರೀಕ್ಷಾ ನಿಯಂತ್ರಕರು ಹುದ್ದೆಯನ್ನು ಹೊಸದಾಗಿ ಸೃಜಿಸಲಾಗಿರುತ್ತದೆ. ಇದರಿಂದ ಪರೀಕ್ಷಾ ನಿಯಂತ್ರಕರ ಮೇಲಿನ ಕಾರ್ಯಭಾರವು ಕಡಿಮೆಯಾಗಿ ಕರ್ತವ್ಯಗಳು ಹಂಚಿಕೆಯಾಗಿರುತ್ತದೆ. ಆದ್ದರಿಂದ ಪ್ರಸ್ತುತ ಆಯೋಗವು ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿಯನ್ನು ನಿಯಮಾನುಸಾರ ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ಸಕಲ ರೀತಿಯಲ್ಲಿ ಸಜ್ಜಾಗಿರುತ್ತದೆ.

ಇದಲ್ಲದೆ, ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಗೋಪ್ಯ ಕಾರ್ಯನಿರ್ವಹಿಸಲು ಜಂಟಿ ಪರೀಕ್ಷಾ ನಿಯಂತ್ರಕರ ಅಧೀನದಲ್ಲಿ 03 ಹೆಚ್ಚುವರಿ ಗೋಪ್ಯಶಾಖೆಗಳನ್ನು ಸೃಜಿಸಿ ಸಹಮತಿ ನೀಡಿದೆ ಹಾಗೂ 27 ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಿಕೊಳ್ಳಲು ದಿನಾಂಕ:15-11-2022ರ ನಡವಳಿಗಳಲ್ಲಿನ ಆದೇಶದಲ್ಲಿ ಸಹಮತಿ ನೀಡಿರುತ್ತದೆ.

ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ಷೆಡ್ಯೂಲ್-Iರಲ್ಲಿ ನಮೂದಿತ ಪ್ರತಿಯೊಂದು ಇಲಾಖೆಗಳು ***ವಾರ್ಷಿಕವಾರು ಮುಂದಿನ ಐದು ವರ್ಷಗಳ*** ಅವಧಿಯಲ್ಲಿ ನಿವೃತ್ತಿ ಹೊಂದುವ ಅಧಿಕಾರಿಗಳಿಂದ ಹಾಗೂ ಮುಂಬಡ್ತಿಯಿಂದಾಗಿ ಸೃಜಿಸಲ್ಪಡುವ ಖಾಲಿ ಹುದ್ದೆಗಳ ವಿವರಗಳನ್ನೊಳಗೊಂಡ ಮಾಹಿತಿಯನ್ನು ಕೆಳಕಂಡಂತೆ ವಿವರಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಮೂಲಕ ಆಯೋಗಕ್ಕೆ ನೀಡಿದ್ದಲ್ಲಿ, ಆಯೋಗವು ಇಲಾಖೆಗಳು ನೀಡುವ ಖಾಲಿ ಹುದ್ದೆಗಳ ಮಾಹಿತಿಯಂತೆ ಹಿಂದಿನ ನೇಮಕಾತಿಯ ರೋಸ್ಟರ್ ಬಿಂದುವಿಗೆ ಅನುಗುಣವಾಗಿ ಪ್ರತಿ ವರ್ಷವು ಸದರಿ ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಿ ನಿಯಮಾನುಸಾರ ನಿಗದಿತ ಕಾಲಮಿತಿಯೊಳಗೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮವಹಿಸುವುದು.

...3

ಇಲಾಖೆಗಳು ಆಯೋಗಕ್ಕೆ ಒದಗಿಸಬೇಕಿರುವ ಮಾಹಿತಿಯ ನಮೂನೆಯು ಕೆಳಕಂಡಂತಿದೆ.

| Sl. No. | Name of the Department | Number of vacancies created | | | | | | | | | |
|---|---|---|---|---|---|---|---|---|---|---|---|
| | | 2022-23 | | 2023-24 | | 2024-25 | | 2025-26 | | 2026-27 | |
| | | Group A | Group B | Group A | Group B | Group A | Group B | Group A | Group B | Group A | Group B |
| 01 | The Karnataka Administrative Service. | | | | | | | | | | |
| 02 | The Karnataka Commercial Tax Department | | | | | | | | | | |
| 03 | The Karnataka Treasury | | | | | | | | | | |
| 04 | The Karnataka Labour Department | | | | | | | | | | |
| 05 | Panchayat Raj Department | | | | | | | | | | |
| 06 | The Karnataka Police Department | | | | | | | | | | |
| 07 | Directorate of Youth Department | | | | | | | | | | |
| 08 | The Karnataka Reserve Police Department | | | | | | | | | | |
| 09 | Social welfare Department | | | | | | | | | | |
| 10 | The Karnataka Food and Civil Supplies Department | | | | | | | | | | |
| 11 | Karnataka Backward Classes and Minorities Department | | | | | | | | | | |
| 12 | The Karnataka Service for Jails Administration. | | | | | | | | | | |
| 13 | The Karnataka Co-operative Department | | | | | | | | | | |
| 14 | The Karnataka Excise Department | | | | | | | | | | |
| 15 | The Karnataka Employment and Training Department | | | | | | | | | | |
| 16 | Survey Settlement and Land Records Department | | | | | | | | | | |
| 17 | The Karnataka Municipal Administrative Department | | | | | | | | | | |
| 18 | The Karnataka Marketing Department | | | | | | | | | | |
| 19 | The Karnataka Co-operative Audit Department | | | | | | | | | | |
| 20 | The Karnataka Tourism Department | | | | | | | | | | |
| 21 | The Karnataka Government Secretariat Service | | | | | | | | | | |
| **Total** | | | | | | | | | | | |

ಮೇಲ್ಕಂಡ ಇಲಾಖೆಗಳಲ್ಲಿ ಅನಿರೀಕ್ಷಿತ ಕಾರಣಗಳಿಂದಾಗಿ ಖಾಲಿ ಹುದ್ದೆಗಳು ಸೃಜಿತವಾದಲ್ಲಿ ಸದರಿ ಹುದ್ದೆಗಳ ಮಾಹಿತಿಯನ್ನು ಆಯೋಗಕ್ಕೆ ಒದಗಿಸಿದ್ದಲ್ಲಿ, ಅವುಗಳನ್ನು ಮುಂದಿನ ವರ್ಷದ ನೇಮಕಾತಿಯಲ್ಲಿ ಸೇರ್ಪಡೆಗೊಳಿಸಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಮುಂದುವರೆದು, ಪ್ರತಿ ವರ್ಷ ನಿಯಮಗಳಲ್ಲಿರುವಂತೆ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿಯನ್ನು ನಡೆಸಲು ಸಾಧ್ಯವಾಗುತ್ತಿಲ್ಲದ ಕಾರಣ ಆಯ್ಕೆ ಪ್ರಾಧಿಕಾರವಾದ ಆಯೋಗಕ್ಕೆ ಮಾತ್ರವಲ್ಲದೆ ನೇಮಕಾತಿ ಪ್ರಾಧಿಕಾರವಾದ ಸರ್ಕಾರಕ್ಕೂ ಇದರಿಂದ ಅಪವಾದ ತಪ್ಪಿದ್ದಲ್ಲ. ಆದ್ದರಿಂದ ಆಯೋಗದಿಂದ ಪ್ರತಿ ವರ್ಷ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿಯ ಹುದ್ದೆಗಳನ್ನು ಕೈಗೊಳ್ಳುವ ಸಲುವಾಗಿ ಮೇಲ್ಕಂಡ ನಿಯಮಗಳನ್ವಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ***ವಾರ್ಷಿಕವಾರು ಮುಂದಿನ ಐದು ವರ್ಷಗಳ*** ಅವಧಿಯ ಖಾಲಿ ಹುದ್ದೆಗಳ ಮಾಹಿತಿಯನ್ನು ಮೇಲ್ಕಂಡ ನಮೂನೆಯಲ್ಲಿ ನೀಡಿದ್ದಲ್ಲಿ, ಅದರಂತೆ ಆಯೋಗವು ಪ್ರತಿ ವರ್ಷ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಕೇಂದ್ರ ಲೋಕಸೇವಾ ಆಯೋಗದಂತೆ ನಿಗದಿತ ಕಾಲಮಿತಿಯೊಳಗೆ ನಡೆಸಲು ಕ್ರಮವಹಿಸುವುದು ಎಂದು ತಿಳಿಸುತ್ತಾ, ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದೊಳಗೆ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ತಮ್ಮನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

**(ಸುರಳ್ಕರ್ ವಿಕಾಸ್ ಕಿಶೋರ್)**
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

O/C

**ಪ್ರತಿ:** ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ, ಬೆಂಗಳೂರು-560001.

27/02/2023
Despatch Clear
D.P.A.R (R & I)
K.G.S., Vidhana Soudhe
Bengaluru